


ಮತ್ತು ಬೇವಿನ ಕೊನೆಗಳಿಂದ ಸಿಂಗರಿಸಿದರು. ಬಿಲ್ಲುಗೂಡಿನ ಮುಂದೆ ಪ್ರತಿ ಗುಂಪಿನವರು ತಾವು ತಂದಿದ್ದ ಜಾಗಟೆ, ತಿರುಪತಿ ಚಂಬು ಮತ್ತು ಹಣ್ಣುಕಾಯಿಗಳನ್ನು ಜಾಡಿಯ ಮೇಲೆ ಇಟ್ಟರು. ಪೂಜಾರಪ್ಪನವರು ಎಲ್ಲರೂ ತಂದಿದ್ದ ಹಣ್ಣುಕಾಯಿ ಒಡೆದು ಪೂಜೆ ಮುಗಿಸಿದರು. ಆಗಲೂ ದಾಸಪ್ಪಗಳು ಗೋವಿಂದ.. ಗೋವಿಂದ ಎಂದು ಏರು ಧ್ವನಿಯಲ್ಲಿ ಕೂಗುತ್ತಿದ್ದರು. ನಂತರ ಪೂಜೆ ಸಲ್ಲಿಸಿದ್ದ ಜಾಡಿಯ ಮುಂದೆ ಮೂಡಲು ದಿಕ್ಕಿಗೆ ಬಿಳಿವಸ್ತ್ರ ಹಾಸಿದರು. ಹಾಸಿದ ವಸ್ತ್ರದ ನಡುವಿಗೆ ಬವನಾಸಿ ಇಟ್ಟು, ಮಣೇವಿಗೆ ಮೂರು ಅಥವಾ ನಾಲ್ಕು ಗುಡ್ಡೆಗಳಲ್ಲಿ ಫಲಹಾರವನ್ನು (ಹಲಸಿನ ಹಣ್ಣು ಮತ್ತು ಬಾಳೆಹಣ್ಣು, ತೆಂಗು ಮತ್ತು ಬೆಲ್ಲ ಹಾಕಿ ಮಾಡಿದ ಫಳಾರ) ಇಟ್ಟರು. ನಂತರ ಬುಡ್ಡನಾಗಪ್ಪ, ಪೂಜಾರ ಚಿತ್ತಯ್ಯ ಮತ್ತು ಹಿರಿಯರಾದ ಪೂಜಾರಯ್ಯನವರು ಮುಂದಾಗಿ ನಿಂತು ಮಣೇವಿಗೆ ಪೂಜೆ ಸಲ್ಲಿಸಿ, ಸಾಂಪ್ರದಾಯಿಕ ನೃತ್ಯದ ಮೂಲಕ ಮಣೇವನ್ನು ಮೂರು ಸಲ ಪ್ರದಕ್ಷಿಣೆ ಬಂದು ನಂತರದಲ್ಲಿ ಕೈಯಲ್ಲಿ ಫಲಹಾರವನ್ನು ಮುಟ್ಟದೆ, ಹಾಗೆಯೇ ಮಣೇವಿನ ಮೇಲೆ ಅಡ್ಡಬಿದ್ದು ಮುಗಿಸಿದರು.

ಯುಗಾದಿಯ ಬಿರುಬಿಸಿಲು ಕೆರೆಯಂಗಳದಲ್ಲಿ ನಿಂತಿದ್ದ ಎಲ್ಲರ ನೆತ್ತಿಯ ಮೇಲೂ ನಿರ್ದಯವಾಗಿ ತನ್ನ ಗುರುತುಗಳನ್ನು ಉಳಿಸಿತ್ತು. ನಾವೂ ಕೂಡ ಬಿಸಿಲಿಗೆ ಬಳಲಿ ನೀರೂ-ನೆರಳಿಲ್ಲದ ಕೆರೆಯಂಗಳದಲ್ಲಿ ನಿಂತಿದ್ದೆವು. ನಮ್ಮ ನೆತ್ತಿಯೂ ಕೂಡ ಕಾದ ಹಂಚಿನಂತಾಗಿತ್ತು. ಇದೆಲ್ಲವನ್ನೂ ಧ್ಯಾಸದಿಂದ ನೋಡುತ್ತಿದ್ದರೆ, ಈ ಆಚರಣೆಯು ಪ್ರಕೃತಿಯ ಆರಾಧನೆಯ ಭಾಗವಾಗಿಯೇ ಗೋಚರಿಸಿತು. ಏಕೆಂದರೆ, ಬದುಕಿನುದ್ದಕ್ಕೂ ಪ್ರಕೃತಿಯೊಡನೆ ಬಾಳಿ-ಬದುಕುವ ಕಾಡುಗೊಲ್ಲರಿಗೆ ಜುಂಜಪ್ಪನಂತೆ ಪ್ರಕೃತಿಯೂ ದೈವವೇ. ಜುಂಜಪ್ಪ ಎನ್ನುವುದು ಕಾಡುಗೊಲ್ಲರಿಗೆ ಕೇವಲ ದೈವ, ಪುರಾಣ, ಪವಾಡ, ವ್ಯಕ್ತಿ ಮಾತ್ರವಾಗಿರದೆ, ಈ ಎಲ್ಲ ಪದಗಳಿಗೆ ಮೀರಿದ ಕಲ್ಪನೆಯೂ ಆಗಿದೆ ಎಂಬುದು ಮನದಟ್ಟಾಗುತ್ತದೆ. ಕಾಡುಗೊಲ್ಲರಿಗೆ ಇತಿಹಾಸವೆಂದರೂ ಇದೇ; ವರ್ತಮಾನವೆಂದರೂ ಇದೇ! ನೀವು ಬೇವಿನಹಳ್ಳಿ, ಜುಂಜಪ್ಪನ ಗುಡ್ಡೆ ಅಥವಾ ಕಳುವೋರಹಳ್ಳಿಗೆ ಹೋಗಿ ಯಾವುದಾದರೂ ಗಿಡಮರವನ್ನೊ ಅಥವಾ ಯಾವುದಾದರೂ ಮಡಗಿನ ನೀರು ಅಥವಾ ಮಜ್ಜನ ಭಾವಿಗಳನ್ನಾದರೂ ಮಾತನಾಡಿಸಿ, ಕೊನೆಗೆ ಅಲ್ಲಿನ ಮಣ್ಣಿನ ದೂಳನ್ನಾದರೂ ಕೈಯಲ್ಲಿ ಹಿಡಿದು ಒಂದು ಗಳಿಗೆ ಮಾತನಾಡಿಸಿ ಅವೆಲ್ಲಾ ಜುಂಜಪ್ಪನ ಬಗ್ಗೆ ಭಾವ ತೀವ್ರತೆಯಿಂದ ಮಾತನಾಡುತ್ತವೆ.